
ನೆಲ ಉಳುತ್ತಿರುವ ರೈತ

ಬೆನ್ನಮೇಲೇ ಹೊತ್ತು ಸಾಗಿಸಬೇಕು. ಶಿಮ್ಲಾದಲ್ಲಿ ಕ್ವಿಂಟಾಲ್ ವಜ್ಜೆಯ ಹಿಟ್ಟಿನ ಚೀಲವನ್ನು ಒಬ್ಬ ಕಾಶ್ಮೀರಿ, ಕೆಳಗಿರುವ ಬಸ್ಸುನಿಲ್ದಾಣದಿಂದ ಘಟ್ಟದ ಮೇಲಿನ ಅಂಗಡಿಗೆ ಹೊತ್ತು ತಂದನು. ನಾನು–ಬಾನು ಸಿಮ್ಲಾದಲ್ಲಿ ರೈಲಿನಿಂದ ಇಳಿದೊಡನೆ ಒಬ್ಬ ಕಾಶ್ಮೀರಿ ಹಮಾಲಿ ಬಂದು ಲಗೇಜನ್ನು ಎತ್ತಿಕೊಳ್ಳುತ್ತೇನೆಂದ. ನೀಳಮೂಗಿನ ಬೆಕ್ಕಿನ ಕಣ್ಣಿನ ನಲ್ವತ್ತರ ಪ್ರಾಯ. ಲಗೇಜು ಹೆಚ್ಚಿರಲಿಲ್ಲ. ಹೋಟೆಲು ಸಮೀಪವಿತ್ತು. ಬೇಡವೆಂದೆವು. ಆತ 'ಹೋಟೆಲ್ ದೂರವಿಲ್ಲ ನಿಜ. ಆದರೆ ದಿನ್ನೆ ಹತ್ತಬೇಕು. ನಿಮಗೆ ತೋಚಿದಷ್ಟು ಕೊಡಿ' ಎಂದ. ಸೂಟುಕೇಸನ್ನು ಹೋಟೆಲಿನಲ್ಲಿ ಇಳಿಸಿದ ಬಳಿಕ ಕೇಳಿದೆ:

'ಕಾಶ್ಮೀರದಿಂದ ಇಲ್ಲಿಗೇಕೆ ಬಂದೆ?'

'ಅಲ್ಲೂ ಇದೇ ಕೆಲಸ ಮಾಡುತ್ತಿದ್ದೆ. ಈಗಲ್ಲಿ ಪ್ರಕ್ಷುಬ್ಧತೆ. ಪ್ರವಾಸಿಗರು ಕಡಿಮೆಯಾಗಿದ್ದಾರೆ'.

'ಇಲ್ಲೆಲ್ಲಿ ವಾಸವಾಗಿದ್ದೀಯಾ?'

'ರಾತ್ರಿ ಅಂಗಡಿಗಳು ಮುಚ್ಚಿದ ಬಳಿಕ ಶಟರುಗಳ ಮುಂದೆ ಇಲ್ಲವೇ ರೈಲ್ವೇ ನಿಲ್ದಾಣದಲ್ಲಿ ಮಲಗುತ್ತೇವೆ. ಸ್ವಲ್ಪ ಹಣ ಊರಿಗೆ ಕಳಿಸುತ್ತೇವೆ. ಮಕ್ಕಳು ಶಾಲೆಗೆ ಹೋಗುತ್ತಾರೆ'.

'ಕಾಶ್ಮೀರದಲ್ಲಿ ಈಗ ಏನಾಗುತ್ತಿದೆ?'

'ಸಾಬ್, ಎರಡನೇ ಟ್ರೈನು ಬರುವ ಹೊತ್ತಾಯಿತು. ತಡವಾದರೆ ಗಿರಾಕಿಗಳು ತಪ್ಪಿಹೋಗುತ್ತಾರೆ'.

ನನ್ನ ಪ್ರಶ್ನೆ ಅನಗತ್ಯವಾಗಿತ್ತೇ? ನನ್ನ ಪ್ರಶ್ನೆಗೆ ಉತ್ತರಿಸುವುದಕ್ಕೆ ತಪ್ಪಿಸಿಕೊಳ್ಳಲು ಹೀಗೆಂದನೆ? ಶಿಮ್ಲಾದ ಸುಪ್ರಸಿದ್ಧ ಚರ್ಚಿನಂಗಳ 'ರಿಡ್ಜ್' ಚಳಿಗಾಲದಲ್ಲಿ ಹಿಮದಿಂದ ತುಂಬಿಹೋಗುತ್ತದೆ. ಎತ್ತರದಲ್ಲಿರುವ ಇಲ್ಲಿಂದ ಕೆಳಗಿನ ಕಣಿವೆಗಳೂ ದೂರದ ದೇವದಾರು ಕಾಡುಗಳೂ ಸೂರ್ಯಾಸ್ತವೂ ಕಾಣುತ್ತವೆ. ಸಂಜೆ ಹೊತ್ತಿಗೆ ಪ್ರವಾಸಿಗರೂ ನಗರದ ಸಿರಿವಂತರೂ ಬೆಚ್ಚನೆ ಬಟ್ಟೆಯುಟ್ಟು, ಕೂಸುಗಳನ್ನು ತಳ್ಳುಗಾಡಿಯಲ್ಲಿ ಕೂರಿಸಿಕೊಂಡು ಬೆಡಗಿನಿಂದ ಸೇರುವರು. ಸನಿಹದಲ್ಲಿರುವ ಪಾಳು ಮನೆಗಳ ಪಡಸಾಲೆಗಳಲ್ಲಿ ಪೋರ್ಟರುಗಳೆಲ್ಲ ಸೇರಿ, ದಿನದ ದುಡಿಮೆ ಲೆಕ್ಕಹಾಕುತ್ತ, ಬೀಡಿ ಚಹಾ ಸೇವಿಸುತ್ತ, ನೇಪಾಳಿ ಕಾಶ್ಮೀರಿ ಡೋಗ್ರಿ ಪಹಾಡಿಯಲ್ಲಿ ಮಾತಾಡಿಕೊಳ್ಳುತ್ತ ಇರುವರು. ಹುಟ್ಟಿದೂರನ್ನು ಬಿಟ್ಟು ಬಂದಿರುವ ಇವರ ಮೊಗದಲ್ಲಿ ಬದುಕನ್ನು ಕಟ್ಟಿಕೊಳ್ಳುತ್ತಿರುವ ತೃಪ್ತಿಯೂ ನಾಳೆ ಹೇಗೆಂಬ ಚಿಂತೆಯೂ ಒಟ್ಟಿಗಿರುತ್ತವೆ.

ಹಿಮಾಲಯದಲ್ಲಿ ಕೂಲಿಗಾಗಿ ಗೋಗರೆವವರು ಇರುವಂತೆ, ಕಸುಬನ್ನು ಚಿಕ್ಕಾಸಿನ ದುರಾಸೆಯಿಲ್ಲದೆ ಘನತೆಯಿಂದ ಬದುಕುವ ಕಸುಬುದಾರರನ್ನೂ ಕಾಣಬಹುದು. ಯಮುನೋತ್ರಿಯ ಹಾದಿಯ ಸಣ್ಣ ಊರಲ್ಲಿ ವಸ್ತಿ ಮಾಡಿದ್ದೆವು. ನನ್ನ ಹರಿದ ಶೂಗಳನ್ನು ನೋಡಿದ ನಮ್ಮ ಟ್ರೆಕ್ಕಿಂಗ್ ತಂಡದ ನಾಯಕನು, ಆತಂಕದಿಂದ 'ಕೇದಾರ ಯಮುನೋತ್ರಿ ಟ್ರೆಕ್ ಮಾಡಬೇಕು. ಹರಿದ ಶೂ ತಂದಿದ್ದೀರಿ' ಎಂದನು. ನನ್ನ ಶೂಗಳ ಸೋಲ್ ಚೆನ್ನಾಗಿತ್ತು. ಆದರೆ ಮೈಹರಿದಿತ್ತು. ಅದರೊಳಗೆ ತಂಗಾಳಿ ನುಗ್ಗಿ ಪಾದವನ್ನು ಶೀತಲಗೊಳಿಸುವ ಅಪಾಯವಿತ್ತು. ಹೊಲಿಸಬೇಕೆಂದು ಚಮ್ಮಾರನಲ್ಲಿಗೆ ಹೋದೆ. ಆತ ನೀಟಾಗಿ ಹೊಲಿದುಕೊಟ್ಟ. ನೂರು ರೂಪಾಯಿ ಕೊಟ್ಟು ಚಿಲ್ಲರೆ ಬೇಡವೆಂದೆ. 'ನನ್ನ ಕೂಲಿ ಐವತ್ತು ರೂಪಾಯಿ. ಅದಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ' ಎಂದು ಐವತ್ತು ರೂಪಾಯಿ ಹೊರಳಿ ಕೊಟ್ಟನು. ಕಲ್ಯಾಣದ ಆಯ್ದಕ್ಕಿ ಲಕ್ಕಮ್ಮ ನೆನಪಾದಳು.

ಹಿಮಾಲಯದಲ್ಲಿ ಅಲ್ಲಿನ ಗಿಡಮರ ಪರ್ವತ ಕಣಿವೆಗಳಂತೆ ಸಹಜವಾದ ಆರೋಗ್ಯವನ್ನೂ ಚೆಲುವನ್ನೂ ಪಡೆದ ಯುವಕ–ಯುವತಿಯರೂ ಉಂಟು. ಜುಡುತಲಾವ್ ಚಾರಣದಲ್ಲಿ ಬಂದಿದ್ದ ಸ್ಥಳೀಯ ಗೈಡ್ ಶಾರೂಕ್ (ನಟ ಶಾರೂಕ್ ಖಾನನಂತೆ ಮುಖಚಹರೆ ಇದ್ದುದರಿಂದ ಹೀಗೆ ಕರೆಯುತ್ತಿದ್ದರು) ಚಂದದ ಯುವಕ. ಹಿಮಪಾತದ ಹಾದಿಯಲ್ಲಿ ಬೀಳದಂತೆ ನಮ್ಮ ತಂಡದ ಮಹಿಳೆಯರ ನಡೆಸಿದವನು. ಮಹಿಳೆಯರಾದರೂ ಅವನ ಪಾಣಿಗ್ರಹಣದಲ್ಲಿ ಎಷ್ಟು ಸಂತೋಷದಲ್ಲಿ ನಡೆಯುತ್ತಿದ್ದರು — ಶೂನ್ಯ ಡಿಗ್ರಿ ತಾಪಮಾನದಲ್ಲೂ ಗಂಡಂದಿರ ಹೊಟ್ಟೆಗೆ ಬೆಂಕಿ ಬೀಳುವಂತೆ. ಶಾರೂಕನಿಗೆ ತನ್ನ ಚೆಲುವಿನ ಪರಿವೆಯೇ ಇದ್ದಂತಿರಲಿಲ್ಲ. ಚಾರಣಿಗರ ಪ್ರಾಣಹೋಗುವ ಅಪಾಯಕರ ಇಳಿಜಾರಿನಲ್ಲಿ ಏಕಾಗ್ರತೆಯಲ್ಲಿ ಕರ್ತವ್ಯ ನಿಭಾಯಿಸುತ್ತಿದ್ದನು. ಹೊಳೆಗಳಲ್ಲಿ ತೆಪ್ಪ ನಡೆಸುವ ಬೆಸ್ತರಂತೆ, ಇಲ್ಲಿನ ಪೋರ್ಟರು–ಗೈಡುಗಳು


ಕುರಿಗಾಹಿ ಬಾಲಕ

ಅಂಗೈಯಲ್ಲಿ ಜೀವವಿಟ್ಟುಕೊಂಡು ಚಾರಣಿಗರನ್ನು ರಕ್ಷಿಸುವವರು. ಯಾರೂ ಅರಿಯದ ಈ ವೀರರ ದುಡಿಮೆಗೂ ಪಡೆವ ಸಣ್ಣ ಸಂಭಾವನೆಗೂ ಸಂಬಂಧವೇ ಇರುವುದಿಲ್ಲ. ಶಾರೂಕನಿಗೆ ಹಿಮಾಲಯ ಕುರಿತ ಪುಸ್ತಕ ಓದಿಕೊಂಡು ಒಳ್ಳೆಯ ಗೈಡಾಗಬೇಕು ಎಂದು ಆಸೆ. ಆದರೆ ಇಂಗ್ಲಿಷ್ ಬಾರದು. ಹಿಂದಿಯಲ್ಲಿದ್ದರೆ ಪುಸ್ತಕ ಕಳಿಸಿಕೊಡಿ ಎಂದು ನಮಗೆ ಬೇಡಿಕೊಂಡನು.

ಚಂದ್ರಖಾನಿಯ ಚಾರಣ ಮುಗಿದು ಕುಲುವಿನಲ್ಲಿರುವ ಬೇಸ್‌ಕ್ಯಾಂಪಿಗೆಂದು,